


ಎಡದಿಂದ ಬಲಕ್ಕೆ :

1. ಪರಂಪರಾನುಗತ ಕ್ರಮ ಪಾಲಿಸಿಯೇ ಮುನ್ನಡೆ (3)
3. ಆರ್ತನಾದ ಮಾಡಲು ಕಾರಣ ಆತನಿಗೆ ಪಾಲಕರೇ ಇಲ್ಲ (3)
4. ಹಳ್ಳಿಯವರ ಉದ್ಧಾರದ ಬಗೆಗೆ ಬರೀ ಚಿಂತನೆಯ ಅಲೆ (3)
6. ಹಿಂಸಾಚಾರದ ಬಳಿಕವೂ ಆತನಿಗೆ ಅನುಚರನೇ ? (4)
7. ಶುಕಗಳ ಈ ಅಬ್ಬರ ಮಂಗಳದಾಯಕ ಹೌದೇ (4)
9. ನಿತ್ಯ ಕೈ ಜೋಡಿಸುವುದು ಹಗಲಿನ ಮೂಲನಾದ ಸೂರ್ಯನಿಗೇ ತಾನೇ? (4)
11. ಗಿಡ ನೆಡುತ್ತಲೇ ಎಲ್ಲರೂ ಹಾಡಿದ್ದು 'ರಾಜ್ಯದ ಹಾಡು' (4)
15. ಶಿಕ್ಷಕರ ಕ್ಷೇಮವನ್ನು ಕಾಪಾಡುವವಳು ಇರಬೇಕು (3)
16. ರಕ್ಕಸರು ಬರದಂತೆ ನಿಗ್ರಹಿಸುವ ಒಪ್ಪಂದ (3)
17. ಆ ಕೇರಿಯ ತುಂಬ ಸದಾ ಮಾರುತ್ತಾರೆ ಕಾಯಿ ಪಲ್ಲೆ (3)

ಮೇಲಿಂದ ಕೆಳಕ್ಕೆ :

1. ಪರಿತಾಪವನ್ನು ಮರೆತರೆ ಎಲ್ಲದರಲ್ಲೂ ಮೊದಲು (3)
2. ಆಕೆಗೆ ತಕ್ಕಂತಿಲ್ಲ ಈ ಎಳ್ಳಿನಾಕಾರದ ಬೊಟ್ಟು (3)
3. ಈ ಬಗೆಯ ಅಲಂಕಾರಕ್ಕೆ ಈ ವೇಳೆ ಸರಿಯಲ್ಲ (3)
5. ಭೂಷಣಕ್ಕೆಂದಿರಲಿ ಬಿಡಿ, ಭಾರೀ ಗೂಳಿ (3)
6. ಹೊಂಬಣ್ಣದ ಆ ವಸ್ತುವಿನ ಹಿಂದಿನ ಭಾಗ ನೋಡಿ (3)
8. ಆ ದೃಶ್ಯ ನೋಡಿದರೇ ಮೈ ಮರೆತು ಹೋಗುತ್ತದೆ ಅಂಥ ಚೆಲುವು! (3)
10. ಕಟ್ಟಿರುವೆಗಳಿಂದ ಕಚ್ಚಿಸುವ ಶಿಕ್ಷೆ ಎಷ್ಟು ಕ್ರೂರ ! (3)
12. ಡಂಭಾಚಾರ ಮೆರೆಯಲು ಈಶ್ವರನ ವಾದ್ಯ (3)
13. ಅಂಕಿ ಅಂಶಗಳೆಲ್ಲ ಸರಿ ಎಂದು ಸೂಚಿಸುವ ಸಹಿ ಇದೇ (3)
14. ಬೇಕೆಂದವರಿಗೆಲ್ಲ ಕಂಡೀತು 'ರೊಟ್ಟಿಯ ಅಂಗಡಿ' (3)

## 27-10-2016ರ ಉತ್ತರಗಳು

ಎಡದಿಂದ ಬಲಕ್ಕೆ :

1. ಉತ್ಥಾನ 3. ಬಿರುಸು 4. ರಜನಿ 6. ಕುಹಕ 7. ಅಭಿರುಚಿ 9. ಕಾಳಧನ 11. ನಷ್ಟಕರ 13. ರವಿವಾರ 15. ಕಾಮನೆ 17. ಶಮನ 18. ರಮೇಶ 19. ನಲಿವು

ಮೇಲಿಂದ ಕೆಳಕ್ಕೆ :

1. ಉಸುಕು 2. ನರಕ 3. ಬಿದಿರು 5. ನಿರಾಳ 7. ಅನ್ಯಜನ 8. ಚಿನಿವಾರ 9. ಕಾಟಾಚಾರ 10. ನಟವರ 12. ಕಲ್ಮಶ 14. ವಿದೇಶ 15. ಕಾನನ 16. ನೆರವು

## ಪ್ರಶ್ನಾಂಕಣ

# ಪಕ್ಷಿಪ್ರಭೇದ: ಭಾರತದಲ್ಲಿ ಎಷ್ಟು ವಿಧ ?

ಹಕ್ಕಿಗಳದು ಧರೆಯ ಜೀವಜಾಲದಲ್ಲಿ ಬಹು ಮಹತ್ವದ ಒಂದು ಪ್ರಧಾನ ವರ್ಗ. ಸರ್ವ ವ್ಯಾಪಕತೆ ಮತ್ತು ಭಾರೀ ವಿವಿಧತೆ ಅದಕ್ಕೆ ಕಾರಣ. ಸಮೀಪ ಅರವತ್ತೈದು ದಶಲಕ್ಷ ವರ್ಷ ಹಿಂದಿನಿಂದ ಅಸ್ತಿತ್ವದಲ್ಲಿರುವ 'ಆಧುನಿಕ ಹಕ್ಕಿ'ಗಳಲ್ಲಿ ಪ್ರಸ್ತುತ 10,135 ಪ್ರಭೇದಗಳಿವೆ.

ಹಾಗೆಂದೊಡನೆ ಕುತೂಹಲದ ಎರಡು ಪ್ರಶ್ನೆಗಳು ಬಹಳ ಸಹಜ : 'ನಮ್ಮ ದೇಶದಲ್ಲಿ ಪಕ್ಷಿ ಪ್ರಭೇದಗಳು ಎಷ್ಟಿವೆ ? ಅವುಗಳಲ್ಲಿ ನಮ್ಮ ದೇಶಕ್ಕಷ್ಟೇ ಸೀಮಿತವಾಗಿರುವ, ಎಂದರೆ ಸಂಪೂರ್ಣ ಸ್ಥಳೀಯವೇ ಆಗಿರುವ (ಎಂಡೆಮಿಕ್) ಪ್ರಭೇದಗಳು ಎಷ್ಟು ?'

ಈ ಪ್ರಶ್ನೆಗಳಿಗೆ ಸ್ಪಷ್ಟ, ನಿಖರ ಉತ್ತರಗಳು ಇತ್ತೀಚಿನವರೆಗೂ ಲಭ್ಯವಿರಲಿಲ್ಲ. ಇದೀಗ ಕೆಲವಾರು ಜನ ಪ್ರತಿಷ್ಠಿತ ಪಕ್ಷಿ ವಿಜ್ಞಾನಿಗಳು ಒಟ್ಟುಗೂಡಿ, ಅತ್ಯಂತ ಶ್ರಮವಹಿಸಿ ಶೋಧಗೊಳಿಸಿರುವ ಈ ಅಂಶಗಳು ಸುಪ್ರಸಿದ್ಧ ವಿಜ್ಞಾನ ವಾರ್ತಾ ಪತ್ರ 'ಇಂಡಿಯನ್ ಬರ್ಡ್ಸ್'ನಲ್ಲಿ ಒಂದೆರಡು ತಿಂಗಳ ಹಿಂದಷ್ಟೇ ಪ್ರಕಟವಾಗಿವೆ. ತನ್ಮೂಲಕ ನಮ್ಮಲ್ಲಿನ ಪಕ್ಷಿ ಸಮೃದ್ಧಿ ಮತ್ತು ವೈವಿಧ್ಯ ಕುರಿತು ಇಡೀ ದೇಶವೇ ಹೆಮ್ಮೆ ಪಡುವಂತಾಗಿದೆ. ಏಕೆಂದು ನೀವೇ ನೋಡಿ :

* ಧರೆಯ ಸಕಲ ಪಕ್ಷಿ ಪ್ರಭೇದಗಳ ಒಟ್ಟು ಸಂಖ್ಯೆಯ ಶೇಕಡ 12 ರಷ್ಟು ಎಂದರೆ 1263 ಪ್ರಭೇದಗಳು ನಮ್ಮ ದೇಶದಲ್ಲಿ ಇವೆ. ವಿಶ್ವದ ಎಲ್ಲ ರಾಷ್ಟ್ರಗಳ ಪಕ್ಷಿ ವೈವಿಧ್ಯದಲ್ಲಿ ನಮ್ಮದು ಎಂಟನೆಯ ಅಗ್ಗಳಿಕೆಯ ಸ್ಥಾನ. ಬ್ರೆಜಿಲ್ (1901 ಪ್ರಭೇದಗಳು), ಪೆರು (1879), ಕೊಲಂಬಿಯಾ (1871) , ಈಕ್ವೆಡಾರ್ (1663), ಇಂಡೊನೇಷಿಯಾ (1604), ಬೊಲೀವಿಯಾ (1448) ಮತ್ತು ವೆನೆಜುವೆಲಾ (1417 ಪ್ರಭೇದಗಳು) ನಂತರದ ಸ್ಥಾನ ನಮ್ಮ ದೇಶದ್ದು. ಆದರೆ ಆ ಮೊದಲ ಎಲ್ಲ ಏಳು ರಾಷ್ಟ್ರಗಳ ಬಹು ಭಾಗ ಭಾರತಕ್ಕಿಂತ ಭಿನ್ನವಾಗಿ ವೃಷ್ಟಿ ವನ ಭರಿತವಾಗಿದ್ದು ಪಕ್ಷಿ ಪ್ರಶಸ್ತವಾಗಿವೆ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

* ಇಡೀ ಪ್ರಪಂಚದ ಖಗ ವರ್ಗದಲ್ಲಿ 40 ವಂಶಗಳ, 238 ಕುಟುಂಬಗಳ, 2292 ಜಾತಿಗಳ ಒಟ್ಟು 10, 135 ಪ್ರಭೇದಗಳಿವೆ. ಆ ಪೈಕಿ ಭಾರತದಲ್ಲಿ 23 ವಂಶಗಳ, 107 ಕುಟುಂಬಗಳ, 498 ಜಾತಿಗಳ ಒಟ್ಟು 1263 ಪ್ರಭೇದಗಳು




ಕಾಣಸಿಗುತ್ತವೆ. ಇದೂ ಕೂಡ ಭಾರತ ಖಗ ವಿಹಿತವಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

* ಅತಿ ಹೆಚ್ಚು ಸಂಖ್ಯೆಯ ಸ್ಥಳೀಯ ಪಕ್ಷಿ ಪ್ರಭೇದಗಳನ್ನು ಪಡೆದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ಐದನೆಯ ಸ್ಥಾನದಲ್ಲಿದೆ. ಪ್ರಥಮ ಸ್ಥಾನದಲ್ಲಿರುವ ಇಂಡೊನೇಷಿಯಾದಲ್ಲಿ 380 ಸ್ಥಳೀಯ ಪ್ರಭೇದಗಳಿವೆ, ಬ್ರೆಜಿಲ್ ನಲ್ಲಿ 270, ಪೆರುವಿನಲ್ಲಿ 139 ಮತ್ತು ಕೊಲಂಬಿಯಾದಲ್ಲಿ 74, ನಂತರದ ಭಾರತದಲ್ಲಿ 61 ಸ್ಥಳೀಯ ಪ್ರಭೇದಗಳಿವೆ. ಅಲ್ಲದೆ 134 ಪ್ರಭೇದಗಳು ಅತ್ಯಧಿಕ ಸಂಖ್ಯೆಯಲ್ಲಿ ನಮ್ಮ ದೇಶದಲ್ಲೇ ನೆಲೆಸಿದ್ದು ಅಲ್ಪ ಸ್ವಲ್ಪವಷ್ಟೇ ಅಕ್ಕ ಪಕ್ಕದ ದೇಶಗಳಲ್ಲಿ ಕಾಣ ಸಿಗುತ್ತವೆ. ಹಾಗೆಲ್ಲ ಆಗಿರುವುದರಿಂದಲೇ ನಮ್ಮಲ್ಲಿನ ಪಕ್ಷಿ ಸಮೃದ್ಧಿ ಮತ್ತು ವೈವಿಧ್ಯ ಅಗ್ರ ಪಂಕ್ತಿಯಲ್ಲಿದೆ.

■ ಎನ್. ವಾಸುದೇವ್